**<u>ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ, ದಾಂಡೇಲಿ</u>**

**<u>ಸಿ.ಸಿ ನಂಃ 746/2024</u>**

ಫಿರ್ಯಾದುದಾರರು ವೆಸ್ಟ್ ಕೊಸ್ಟ್ ಪೇಪರ್ ಮಿಲ್ ಲಿ. ದಾಂಡೇಲಿ
ಕಾರವಾರ , ಉತ್ತರ ಕನ್ನಡ
ಇದರ ಪ್ರತಿನಿಧಿ ಃ ಗಂಗಾಧರ ಎಲ್ ಭಾಗ್ವತ್,
ಹಿರಿಯ ವ್ಯವಸ್ಥಾಪಕರ- ಕಾನೂನು,
ವೆಸ್ಟ್ ಕೊಸ್ಟ್ ಪೇಪರ್ ಮಿಲ್ ಲಿಮಿಟೆಡ್,
ತಾಲೂಕಾ-ದಾಂಡೇಲಿ, ಉತ್ತರ ಕನ್ನಡ ಜಿಲ್ಲೆ.

**---ವಿರುದ್ಧ ---**

ಆರೋಪಿ ಬಾಬುಲಾಲ್ ತಂಃ ಮೊದರಾಮ್ ,
ಪ್ರೊಪ್ರೈಟರ್ ಬೆಂಗಳೂರು ಸೆಲ್ಸ್ ಮತ್ತು ಮಾರ್ಕೆಟಿಂಗ್,
1/2, 2ನೇ ಕ್ರಾಸ್, ಕೆ.ವಿ. ದೇವಸ್ಥಾನ ನಗರ,
ಸುಲ್ತಾನ ಪೇಟ್, ಬೆಂಗಳೂರು-560 003.

**<u>ಆಪಾದನೆ</u>**

**ಶ್ರೀಮತಿ. ತೇಜಸ್ವಿನಿ ಸೊಗಲದ** ಪ್ರ.ದ.ನ್ಯಾ..ದಂಡಾಧಿಕಾರಿಗಳು, ದಾಂಡೇಲಿ ಆದ ನಾನು ನಿಮ್ಮ ಮೇಲೆ ಮಾಡುವ ಆಪಾದನೆ ಇಂತಿದೆಃ

ಆರೋಪಿಯಾದ ನೀವು ನೊಂದಾಯಿತ ಕಂಪನಿಯಾದ ಪಿರ್ಯಾದಿದಾರರ ಕಂಪನಿಯಿಂದ 139.92 ಮೆಟ್ರಿಕ್ ಟನ್‌ನಷ್ಟು ಪೇಪರನ್ನು ದಿಃ 28-12-2023 ರಿಂದ ದಿಃ 26-06-2024 ರವರೆಗೆ ನಿಮ್ಮ ಇಂಡೆಂಟ್ ಪ್ರಕಾರ ನೀಡಿದ್ದು, ಸದರಿ ಇಂಡೆಂಟ್‌ಗಳ ಒಟ್ಟು

ಮೊತ್ತ ರೂಃ 1,36,97,226-00 ಆಗಿದ್ದು, ಸದರಿ ಮೊತ್ತವನ್ನು ತಾವು ನಿಗದಿತ ಸಮಯದಲ್ಲಿ ಭರಣಾ ಮಾಡದ ಕಾರಣ, ಪಿರ್ಯಾದಿ ಕಂಪನಿಯು ರೂಃ 2,69,938-00 ಮತ್ತು ರೂಃ 1,09,069-00 ಗಳಂತೆ 2 ಡೇಬಿಡ್ ನೋಟಗಳನ್ನು ನಿಮ್ಮ ಖಾತೆಗೆ ಹಾಕಿದ್ದು, ಮತ್ತು ಈವರೆಗೂ ಹಣ ಮರು ಪಾವತಿ ಮಾಡದ ಕಾರಣ, ಸದರಿ ಬಾಕಿ ಮೊತ್ತದ ಮೇಲಿನ ಬಡ್ಡಿಯನ್ನು ದಿಃ 31-03-2024 ರ ಪ್ರಕಾರ ರೂಃ 5,43,194-00 ಗಳನ್ನು ಸೇರಿಸಿದಾಗ , ತಾವು ಪಿರ್ಯಾದಿ ಕಂಪನಿಗೆ ರೂಃ 1,36,97,226-00 ಗಳನ್ನು ನೀಡಲು ಬಾಧ್ಯತೆಯನ್ನು ಹೊಂದಿರುತ್ತೀರಿ. ಆ ಪ್ರಕಾರ ಸದರಿ ಹಣವನ್ನು ಪಾವತಿ ಮಾಡಲು ಕೇಳಿದಾಗಲೂ ಸಹ ಪಾವತಿ ಮಾಡಿರುವುದಿಲ್ಲ.

ಕೊನೆಯಾದಾಗಿ, ಪಿರ್ಯಾದಿ ಕಂಪನಿಯು ಸದರಿ ಹಣವನ್ನು ಪಾವತಿ ಮಾಡಲು ಕೇಳಿದಾಗ, ನೀವು ನಿಮ್ಮ ಖಾತೆಗೆ ಸೇರಿದ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ದಾಂಡೇಲಿ ಶಾಖೆಯ ಚೆಕ್ ನಂ. 002951 ಚೆಕ್ಕನ್ನು ರೂ. 24,00,000/- ಸಾಲದ ಮರುಪಾವತಿಗಾಗಿ ಫಿರ್ಯಾದಿಗೆ ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದಿಯು ದಿನಾಂಕ 30-04-2024 ರಂದು ಸಲ್ಲಿಸಿದಾಗ ಸದರಿ ಬ್ಯಾಂಕಿನವರು ಸದರಿ ಚೆಕ್ಕನ್ನು ಪರಿಶೀಲಿಸಿ ದಿಃ 30-04-2024 ರಂದು "Drawers signature differs" ಎಂದು ಹಿಂಬರಹದೊಂದಿಗೆ ಉತ್ತರಿಸಿರುತ್ತಾರೆ. ನಂತರ ಫಿರ್ಯಾದಿದಾರರು ತಮ್ಮ ವಕೀಲರ ಮೂಲಕ ದಿನಾಂಕಃ 29-05-2024 ರಂದು ನೋಂದಾಯಿತ ಅಂಚೆ ಮೂಲಕ ನೋಟೀಸನ್ನು ಕಳುಹಿಸಿದ್ದು ಸದರಿ ನೋಟೀಸು ತಮಗೆ ದಿಃ 14-06-2024 ರಂದು ಜಾರಿ ಆಗಿದ್ದರೂ ಸಹ ನೀವು ಚೆಕ್ಕಿನ ಹಣ ಪಾವತಿ ಮಾಡದೇ ಉದ್ದೇಶಪೂರ್ವಕವಾಗಿ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲವೆಂಬ ವಿಚಾರವನ್ನು ತಿಳಿದಿದ್ದು ಚೆಕ್ಕನ್ನು ನೀಡಿ ನೆಗೋಶಿಯಬಲ್ ಇನ್ಸಸ್ಟ್ರುಮೆಂಟ ಕಾಯ್ದೆ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತೀರ ಎಂದು ಆಪಾದಿಸಲಾಗಿದೆ.

## ಆರೋಪಿಯ ಹೇಳಿಕೆ

**ಪ್ರಶ್ನೆಃ 1:** ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೇ?

**ಉತ್ತರಃ ತಿಳಿಯಿತು**

**ಪ್ರಶ್ನೆ: 2:** ಈ ಆರೋಪಣೆಯ ಬಗ್ಗೆ ನೀವು ನಿಮ್ಮ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ ?

**ಉತ್ತರಃ ವಿಚಾರಣೆಯಾಗಬೇಕು**

(ಆರೋಪಿಗೆ ಅಪಾದನೆಯ ಸಾರಾಂಶವನ್ನು ಅವರಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ ಕೇಳಿ ಅವರ ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

ಸ್ಥಳಃ ದಾಂಡೇಲಿ

ಸಹಿ ಇದೆ/-

ದಿನಾಂಕಃ 15-09-2025

**ಪ್ರ.ದ.ನ್ಯಾ..ದಂಡಾಧಿಕಾರಿಗಳು**,

**ದಾಂಡೇಲಿ**